# ರಂಗ ಕೊಳಲನೂದಲಾಗಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 103
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 489
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 161
4. **Note:** Lyrics given without highlights are as per Ref. 1. The wordings given in yellow highlights are as per Ref. 2. The wordings given in Ref. 3 are a mix of Ref. 1 and Ref. 2.
5. **Note:** Singer has followed lyrics as in Ref. 2.

| | |
|---|---|
| ರಾಗ: ನೀಲಾಂಬರಿ ತಾಳ: ಅಟ | ರಾಗ: ಆರಭಿ ತಾಳ: ಏಕ |
| | |
| ರಂಗ ಕೊಳಲನೂದಲಾಗ | ರಂಗ ಕೊಳಲನೂದಲಾಗಿ |
| ಮಂಗಳಮಯವಾಯ್ತು ಧರೆ, ಜ- ॥ ಪ ॥ | ಮಂಗಳಮಯವಾಯಿತು ಧರೆ ಜ- |
| ನಂಗಳು ಚೈತನ್ಯ ಮರೆದು | ಗಂಗಳು ಚೈತನ್ಯ ಮರೆದು |
| ರಂಗಧ್ಯಾನಪರರಾದರು ॥ ಅಪ ॥ | ಅಂಗ ಪರವಶವಾದುವು |
| | |
| ಬಾಡಿದ ಮಾಮರಗಳು ಗೊನೆಯೊಡೆದವು | ತೀಡಿದ ಮಾರುತ ಮಂದಗತಿಗೆಯ್ದು |
| ತೀಡುವ ಮಾರುತ ಮಂದಗತಿಗೊಯ್ಯೆ | ಬಾಡಿದ ಅಲರು ಫಲ ಗೊಂಚಲು ಬಿಡೆ |
| ಬಾಡಿದ ಬರಲು ಫಲದ ಗೊಂಚಲು | ಪಾಡಲೊಲ್ಲವಳಿ ಕುಲಗಳು |
| ಪಾಡಲೊಲ್ಲವಳಿ ಕುಲಗಳು | ಬಾಡಿದ ಮಾಮರ ಚಿಗುರೊಡೆಯೆ |
| ಹೇಡಿಗೊಂಡವು ಜಕ್ಕವಕ್ಕಿ ಗಿಳಿ ಮಾ- | ಹೇಡಿಗೊಂಡವು ಜಾಣ್ವಕ್ಕಿ ಗಿಳಿ ಮಾ- |
| ತಾಡದೆ ಕಳೆಗುಂದಿದವು ಕೋಗಿಲೆ | ತಾಡದೆ ಕಳೆ ಕುಂದಿದುವು ಕೋಗಿಲೆ |
| ಓಡಾಟ ವೈರಾಟ ಬಿಟ್ಟು ಖಗಮೃಗ | ಓಡಾಟ ವೈರಾಟ ಬಿಟ್ಟು ಖಗಮೃಗ |
| ಗಾಢ ನಿದ್ರಾವಶವಾದವು ॥ 1 ॥ | ಗಾಢ ನಿದ್ರಾವಶವಾದುವು |
| | |
| ಕೆಳಗಿನುದಕ ಉಬ್ಬೇರಿ ಬಂದುವು | ತಳದುದಕ ಉಕ್ಕೇರಿ ಬಂದುವು |
| ತುಳುಕಿ ಚೆಲ್ಲಾಡಿ ನಿಂದಳು ಯಮುನೆ | ತುಳುಕಿ ಚೆಲ್ಲಾಡಿ ನಿಂದಳು ಯಮುನೆ |
| ಮಳೆಯ ಮೋಡೊಡ್ಡಿ ಮೇಘಾಳಿ ಧಾರಿಟ್ಟುವು | ಮೇಲೆ ಮೇಲೋಡಿ ಮೇಘಾಳಿ ಧಾರಿಟ್ಟುವು |
| ಕಲುಕರಗಿ ಕರಗಿ ನೀರಾದುವು | ಕಲ್ಲು ಕರಗಿ ನೀರಾದುವು |
| ನಳಿನ ಚಂಪಕ ನಾಗ ಪುನ್ನಾಗ ಪಾ – | ನಳಿನ ಚಂಪಕ ನಾಗ ಪುನ್ನಾಗ ಪಾ - |
| ಟಲ ಸೇವಂತಿಗೆ ಕುಂದ-ಮೊಲ್ಲೆ ಮಲ್ಲಿಗೆ ಬ- | ಟಲ ಶಾವಂತಿಗೆ ಕುಂದ ಬಕುಳವು |
| ಕುಲ ಮಾಲತಿ ಜಾಜಿ ಪರಿಮಳಗೂಡಿ | ಮಾಲತಿ ಜಾಜಿ ಪರಿಮಳಗೂಡಿತು |

ನೀಲಾಂಗನಂಘ್ರಿಗೆ ನೆರೆದುವು ॥ 2 ॥

ನೀಲಾಂಗನಂಘ್ರಿಗೆರಗಿದವು

ಕೆಚ್ಚಲು ಬಿಗಿದು ತೊರೆದ ಮೊಲೆಯೊಳು
ವತ್ಸದೊಡಲಾಸೆ ಜರಿದು ಎಳೆ ಹಲ್ಲ
ಕಚ್ಚದಲ್ಲಿಗಲ್ಲಿ ನಿಂದುವು ತಮ್ಮಯ
ಪುಚ್ಛವ ನೆಗಹಿ ನೀಂಟಿಸಿ
ಅಚ್ಯುತನಾಕೃತಿ ನೋಡಲು ಸುರರಿಗೆ
ಅಚ್ಚರಿಯಾಯಿತು ಆವು ಕಂಡಾನಂದ
ಪೆಚ್ಚಿ ಮುಕುಂದನ ಲೀಲಾವಿನೋದಕೆ
ಮೆಚ್ಚಿ ಕುಸುಮವ ಸುರಿದರು ॥ 3 ॥

ಮುದ್ದು ಮೋಹನನ ಮಂಜುಳ ಸಂಗೀತ
ಸದ್ದನಾಲೈಸಿ ಗೋಪಾಂಗನೆಯರೆಲ್ಲ
ಬುದ್ಧಿ ಸೂರಾಡಿ ಆನಂದ ವಾರಿಧಿಯಲ್ಲಿ
ಬಿದ್ದು ಪರವಶರಾದರು
ಸಿದ್ಧ ಮುನಿಜನರಿದ್ದ ಸಮಾಧಿಯೊ-
ಳೆದ್ದು ಕುಣಿದರು ಎದುರೆದುರಾಗಿ
ಗದ್ದುಗೆಯರಸನೋಲೈಸಿ ಕೊಂಡರು
ಗೆದ್ದರು ಭವ ಸಮುದ್ರವ

ಮುದ್ದು ಮೋಹನನ ಮಂಜುಳ ಸಂಗೀತ
ಸದ್ದನಾಲಿಸಿ ಗೋಪಾಂಗನೆಯರೆಲ್ಲ
ಬುದ್ಧಿ ಸೂರಾಡಿ ತಮ್ಮಾಲಯವನೆ ಬಿಟ್ಟು
ಎದ್ದು ಪರವಶರಾದರು
ಸಿದ್ಧ ಮುನಿಜನರಿದ್ದ ಸಮಾಧಿಯಿಂ -
ದೆದ್ದೆದ್ದು ಕುಣಿದೆದ್ದರು ಎದುರಾಗಿ
ಗದ್ದುಗೆಯರಸನ ಒಲಿಸಿಕೊಂಡರು
ಗೆದ್ದರು ಭವದ ಸಮುದ್ರವನು ॥ 4 ॥

ಕೆಚ್ಚಲು ಬಿಗಿದು ತೊರೆಯಲು ಮೊಲೆಯು
ವತ್ಸಗಳೊಡಲಾಸೆಯು ತೊರೆದೆಳೆ ಹುಲ್ಲ
ಕಚ್ಚಿರಲ್ಲಲ್ಲಿ ನಿಂದುವು ಗೋವ್ಗಳು
ಪುಚ್ಛವ ನೆಗಹಿ ನೀಂಟಿಸಿ
ಅಚ್ಯುತನಾಕೃತಿ ನೋಡಲು ಸುರರಿಗೆ
ಆಶ್ಚರ್ಯವಾಯಿತು ನಾವು ಕಂಡೆವೆಂದು
ಮೆಚ್ಚಿ ಮುಕುಂದನ ಲೀಲಾ ವಿನೋದಕೆ
ಹೆಚ್ಚಿನ ಕುಸುಮವ ಸುರಿದರು

ಶ್ರೀ ಮನೋಹರ ಗೋಪಾಲ ಮೂರುತಿ
ಆ ಮಧುಕುಂಜ ವನದಿ ತ್ರಿಭಂಗಿಯಲಿ
ಹೇಮಾಂಬರವುಟ್ಟು ಗೀರುಗಂಧ ಕಸ್ತೂರಿ
ನಾಮ ಮುಕುಟದ ಬೆಳಕಿನಲಿ
ದಾಮ ವನಮಾಲೆ ಶ್ರೀವತ್ಸ ಕೌಸ್ತುಭ
ಸ್ವಾಮಿ ಪುರಂದರ ವಿಠ್ಠಲ ರಾಯನ
ರಾಮಕ್ರಿ – ಗುಂಡಕ್ರಿ ಮೇಘರಂಜನೆ ಪಾಡಿ
ಸಾಮ ಗಾನ ಪ್ರಿಯ ನಮೊ ಎಂದರು ॥ 5 ॥

ಶ್ರೀ ಮನೋಹರ ಗೋಪಾಲ ಮೂರುತಿ
ಆ ಮಧುಕುಂಜ ವನದಿ ತ್ರಿಭಂಗಿಲಿ
ಹೇಮಾಂಬರವುಟ್ಟು ಸುಗಂಧ ಕಸ್ತೂರಿ
ನಾಮ ಮಕುಟದ ಬೆಳಗಿನಲಿ
ಧಾಮ ವನಮಾಲೆ ಬಹಿರ್ಭೂಶಿತ
ಸ್ವಾಮಿ ಪುರಂದರ ವಿಠ್ಠಲ ರಾಯನು
ರಾಮಕ್ರಿಯ ಮೇಘರಂಜನಿ ಪಾಡೆ
ಸಾಮವೇದ ನಮೋ ನಮೋ ಎನ್ನೆ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನು ಕೊಳಲನೂದಿದಾಗ ನಿಸರ್ಗದಲ್ಲಿ ನಡೆದ ಸ್ಥಿತ್ಯಂತರಗಳನ್ನು ದಾಸರು ಈ ಹಾಡಿನಲ್ಲಿ ವಿವರವಾಗಿ ಹೇಳಿದ್ದಾರೆ.

**ಚೈತನ್ಯ ಮರೆದು** – ಮೈಮರೆತು.

**ತೀಡಿದ ಮಾರುತ** – ಬೀಸಿದ ಗಾಳಿ.

**ಅಳಿಕುಲಗಳು** – ದುಂಬಿಗಳು.

**ಮಾಮರ** – ಮಾವಿನಮರ.

**ಬರಲು** = ಒಣಗಿದ ಗಿಡ ಬಳ್ಳಿಗಳು

**ಹೇಡಿಗೊಳ್ಳು** = ನಿಸ್ಸತ್ತ್ವವಾಗು

**ಜಾಣ್ವಕ್ಕಿ** = ಚಕ್ರವಾಕ

**ಜಕ್ಕವಕ್ಕಿ** = ಚಕ್ರವಾಕ

**ಖಗ ಮೃಗ** – ಹಕ್ಕಿಗಳೂ ಪಶುಗಳೂ.

**ಮೇಘಾಳಿ ಧಾರಿಟ್ಟುವು** – ಮೋಡಗಳ ಗಡಣ ಧಾರೆಯಾಗಿ ಮಳೆಗರೆದವು.

**ಬುದ್ಧಿ ಸೂರ್‍ಯಾಡಿ** – ಬುದ್ಧಿಯನ್ನು ಚೆಲ್ಲಿಕೊಟ್ಟು ; ಆಲೋಚನೆ ಮಾಡದಂತೆ; ಭ್ರಮೆಯಿಂದ.

**ವೈರಾಟ** = ಹಗೆತನ

**ಒಡ್ಡು** = ವ್ಯಾಪಿಸು

**ನಳಿನ** = ಕಮಲ

**ಚಂಪಕ** = ಸಂಪಿಗೆ

**ಬಕುಳ = ಬಕುಲ** = ಸುವಾಸನೆಯ ಹೂವು ಕೊಡುವ ಒಂದು ವೃಕ್ಷ

**ನಾಗ** = ಎಳೆಯ ಬಳ್ಳಿ

**ಪುನ್ನಾಗ** = ಕರಿಯ ಎಲೆಬಳ್ಳಿ

**ಪಾಟಲ** = ಪಾದರಿ

**ಒಡಲಾಸೆ** = ಕರುವಿನ ಪ್ರೀತಿ

**ನೀಂಟಿಸಿ** = ನೇರವಾಗಿ ಮಾಡಿ

**ಬುದ್ದಿ ಸೂರಾಡಿ** = ಸಂಭ್ರಾನ್ತರಾಗಿ ಭ್ರಾ ತ

**ಗದ್ದಿಗೆಯರಸ** = ಸರ್ವಶ್ರೇಷ್ಠನಾದ

**ಮಧುಕುಂಜ ವನ** = ವೃಂದಾವನದ ಒಂದು ಭಾಗ

**ರಾಮಕ್ರಿ, ಗುಂಡಕ್ರಿ ಮೇಘರಂಜಿನಿ** = ಇವು ಕರ್ನಾಟಕ ಸಂಗೀತದ ಮೂರು ಘನ ರಾಗಗಳು

**ವತ್ಸಗಳು** – ಕರುಗಳು.

**ಪುಚ್ಛವ ನೆಗಹಿ ನೀಂಟಿಸಿ** – ಬಾಲವನ್ನು ಹಾರಿಸಿ ನೆಟ್ಟಗೆ ಮಾಡಿ.

**ತ್ರಿಭಂಗಿ** – ನಾಟ್ಯದ ಒಂದು ಪ್ರಕಾರ; ದೇಹದ ಮೂರು ಎಡೆಗಳಲ್ಲಿ ಬಾಗಿ ನಿಲ್ಲುವುದು.

**ಗೀರ್ಗಂಧ** – ಗಂಧದ ಗೀರು (ಹಣೆಯ ಮೇಲೆ).

**ದಾಮ** – ನಡುಪಟ್ಟಿ.

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** ranga, kolalu, mangala, bhumi, Dhyana, phala, gili, pakshi, kogile, nidde, niru, Yamuna, male, kallu, mallige, pushpa, Krishna, govu, halu, achyuta, sura, mukunda, mohana, Gopala, mane, muni, jana, arasa, bhava, Samudra, manohara, madhu, kaadu, gandha, Kasturi, gopi, Priya, Ananda,
**Pravachana:** NA
**Explanation:** NA